# ಕೆ. ಷರೀಫಾರವರ ಕಾವ್ಯದಲ್ಲಿ ಬಂಡಾಯದ ನೆಲೆಗಳು ಮತ್ತು ಸ್ತ್ರೀ ಅಸ್ಮಿತೆಯ ಶೋಧ

**ತ್ಯಾಗರಾಜು ಹೆಚ್.ವಿ.**

ಉಪನ್ಯಾಸಕರು, ಸೇಂಟ್ ಫ್ರಾನ್ಸಿಸ್ ಕಾಲೇಜು, ಬೆಂಗಳೂರು.

**DOI: https://doi.org/10.5281/zenodo.18785635**

## ABSTRACT:

ಎಪ್ಪತ್ತು-ಎಂಬತ್ತರ ದಶಕದ ದಲಿತ-ಬಂಡಾಯ ಸಾಹಿತ್ಯ ಚಳವಳಿಯ ಪ್ರಮುಖ ಕವಯಿತ್ರಿ ಕೆ. ಷರೀಫಾ ಅವರ ಕಾವ್ಯಗಳಲ್ಲಿನ ಬಂಡಾಯದ ನೆಲೆಗಳು ಮತ್ತು ಸ್ತ್ರೀ ಅಸ್ಮಿತೆಯ ಹುಡುಕಾಟವನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಮುಸ್ಲಿಂ ಸಂವೇದನೆಯ ಹಿನ್ನೆಲೆಯಿಂದ ಬಂದರೂ, ಸಮಸ್ತ ಸ್ತ್ರೀ ಸಮುದಾಯದ ನೋವು, ಶೋಷಣೆ ಮತ್ತು ದಮನಿತ ಬದುಕನ್ನು ಇವರ ಕವಿತೆಗಳು ಒಕ್ಕೊರಲಿನಿಂದ ಪ್ರಶ್ನಿಸುತ್ತವೆ. ಪಿತೃಪ್ರಧಾನ ವ್ಯವಸ್ಥೆಯು ನಿರ್ಮಿಸಿದ ಚರಿತ್ರೆ, ಧಾರ್ಮಿಕ ಕಟ್ಟುಪಾಡುಗಳು ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ಸಿಡಿದೇಳುವ ಇವರ ಕಾವ್ಯವು, ಮೌನವನ್ನು ಮುರಿದು ಹಕ್ಕೊತ್ತಾಯ ಮಾಡುವ ಪ್ರಬಲ ಅಭಿವ್ಯಕ್ತಿಯಾಗಿದೆ. ವರದಕ್ಷಿಣೆ, ಸತಿ ಪದ್ಧತಿಯಂತಹ ಅನಿಷ್ಟಗಳ ವಿರುದ್ಧದ ಆಕ್ರೋಶ ಮತ್ತು ಲಿಂಗ ಸಮಾನತೆಯ ಆಶಯಗಳು ಇವರ ಬರಹಗಳ ಮುಖ್ಯ ತಿರುಳಾಗಿರುವುದನ್ನು ಇಲ್ಲಿ ಚರ್ಚಿಸಲಾಗಿದೆ.

**KEYWORDS:**

ಬಂಡಾಯ ಸಾಹಿತ್ಯ, ಸ್ತ್ರೀ ಅಸ್ಮಿತೆ, ಮಹಿಳಾ ಕಾವ್ಯ, ಸಾಮಾಜಿಕ ಶೋಷಣೆ, ಪಿತೃಪ್ರಧಾನ ವ್ಯವಸ್ಥೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಲವು ಸಾಹಿತ್ಯ ಪಂಥಗಳನ್ನು ಗುರುತಿಸುತ್ತೇವೆ. ಅಂತಹ ಸಾಹಿತ್ಯ ಪಂಥಗಳಲ್ಲಿ ದಲಿತ–ಬಂಡಾಯ ಸಾಹಿತ್ಯ ಪಂಥವೂ ಒಂದಾಗಿದೆ. ದಲಿತ ಪಂಥವು ಚಳವಳಿ ಮತ್ತು ಸಾಹಿತ್ಯ ಎರಡೂ ಜೊತೆಜೊತೆಗೆ ನಡೆದವು. ಅವು ಒಂದಕ್ಕೊಂದು ಪೂರಕ–ಪೋಷಕವಾಗಿ ನೆಲೆನಿಂತವು. ಇದು 70–80ರ ದಶಕದಲ್ಲಿ ಕರ್ನಾಟಕದ ಸಂದರ್ಭದಲ್ಲಿ ಒಂದು ಮೈಲುಗಲ್ಲು. 12ನೇ ಶತಮಾನದಲ್ಲಿ ಹೇಗೆ ತಳಸಮುದಾಯಗಳೆಲ್ಲವೂ ಒಟ್ಟಿಗೆ ಸೇರಿ ಭಾರತದಲ್ಲಿ ಬೇರೂರಿದ್ದ ವರ್ಣ, ವರ್ಗ, ಜಾತಿ ಎಂಬ ಶ್ರೇಣೀಕೃತ ವ್ಯವಸ್ಥೆಯ ವಿರುದ್ಧ ಸಾಂಘಿಕವಾಗಿ ಬಂಡೆದ್ದರೋ, ಅದೇ ಕ್ರಮದಲ್ಲೇ 70–80ರ ದಶಕದಲ್ಲಿ ದಲಿತ–ದಮನಿತ ಶೋಷಿತ ಸಮುದಾಯಗಳು ಶ್ರೇಣೀಕೃತ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಲಾರಂಭಿಸಿದರು. ಯಾರು ಈ ಸಮಾಜದಲ್ಲಿ ಹಲವು ಶತಮಾನಗಳಿಂದ ಹಕ್ಕು ಮತ್ತು ಬಾಧ್ಯತೆಗಳನ್ನು ಕಳೆದುಕೊಂಡಿದ್ದರೋ ಅಂಥವರು ಹಾಗೂ ಅಂಥವರ ಪರವಾಗಿ ಮಾತನಾಡಲಾರಂಭಿಸಿದರು. ಹೀಗೆ ಮಾಡಿದ್ದರ ಫಲವಾಗಿ ದಲಿತ–ಬಂಡಾಯವೆಂಬ ಸಾಂಸ್ಕೃತಿಕ ಎಚ್ಚರವನ್ನು ಕೊಟ್ಟ ಸಾಹಿತ್ಯ ಚಳವಳಿಯೊಂದು ಅಸ್ತಿತ್ವಕ್ಕೆ ಬರಲಾರಂಭಿಸಿತು. ಈ ಸಾಹಿತ್ಯ ಚಳವಳಿಯು ಅನೇಕ ಚಳವಳಿಗಳನ್ನು ತನ್ನ ಒಡಲಲ್ಲಿ ಅಡಗಿಸಿಟ್ಟುಕೊಂಡಿತ್ತು. ಅವುಗಳಲ್ಲಿ ರೈತ ಚಳವಳಿ, ಪರಿಸರ ಚಳವಳಿ, ಭೂ ಹೋರಾಟದ ಚಳವಳಿ, ಮಹಿಳಾ ಚಳವಳಿ ಹೀಗೆ ಹಲವು ಚಟುವಟಿಕೆಗಳು ಇದ್ದರೂ ಕೂಡ ಅದು ದಲಿತ–ಬಂಡಾಯವೆಂಬ ಒಂದೇ ಬ್ಯಾನರ್‌ನ ಅಡಿ ಮುನ್ನಡೆಯುತ್ತಿದ್ದವು. ಈ ಹಿನ್ನೆಲೆಯಲ್ಲಿ ಮಹಿಳಾ ಸಾಹಿತ್ಯ ಚಳವಳಿಯು 70–80ರ ದಶಕದಲ್ಲಿ ಒಂದು ಹೊಸ ಮನ್ವಂತರಕ್ಕೆ ದಾರಿ ಮಾಡಿಕೊಟ್ಟಿತು. ಮಹಿಳೆಯು ಕೂಡ ಅನೇಕ ಶತಮಾನಗಳಿಂದ ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಯಲ್ಲಿ ಸಿಲುಕಿ ತಮ್ಮನ್ನು ತಾವು ಕಳೆದುಕೊಂಡಿದ್ದರು. ಇದಕ್ಕೆ ಪೂರಕವಾದ ವಾತಾವರಣ 70ರ ದಶಕದಲ್ಲಿ ನಿರ್ಮಾಣವಾದ್ದರಿಂದ ಮಹಿಳೆಯೂ ಕೂಡ ತನಗಾದ ಶೋಷಣೆಗಳನ್ನು, ತನಗೆ ಇರುವ ಹಕ್ಕುಗಳನ್ನು ಕುರಿತು ಧ್ವನಿಯೆತ್ತಲಾರಂಭಿಸಿದಳು. ಅಂಥವರಲ್ಲಿ ಪ್ರತಿಭಾ ನಂದಕುಮಾರ್, ಸವಿತಾ ನಾಗಭೂಷಣ್, ಗೀತಾ ನಾಗಭೂಷಣ್, ಸಾ. ರಾ. ಅಬೂಬಕರ್, ಹೆಚ್. ಎಲ್. ಪುಷ್ಪ, ಸುಕನ್ಯಾ ಮಾರುತಿ, ಕೆ. ಆರ್. ಸಂಧ್ಯಾರೆಡ್ಡಿ, ಕೆ. ಷರೀಫಾ, ದು. ಸರಸ್ವತಿ, ಪಿ. ಚಂದ್ರಿಕಾ, ಉಷಾ ಸರ್ವಮಂಗಳ, ಆರ್. ಸುನಂದಮ್ಮ ಮೊದಲಾದವರನ್ನು ಈ ಸಾಲಿನಲ್ಲಿ ಗುರುತಿಸಬಹುದಾಗಿದೆ.

ಹೀಗೆ 70–80ರ ದಶಕದಲ್ಲಿನ ಮುಂಚೂಣಿ ಬರಹಗಾರರಲ್ಲಿ ಅಥವಾ ಮಹಿಳಾ ಬರಹಗಾರರಲ್ಲಿ ಕೆ. ಷರೀಫಾ ಅವರೂ ಒಬ್ಬರಾಗಿದ್ದಾರೆ. ಕೆ. ಷರೀಫಾರವರು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟ ಮತ್ತು ಮಹತ್ವದ ಬರಹಗಾರರಲ್ಲಿ ಒಬ್ಬರಾಗಿದ್ದಾರೆ. ಆಧುನಿಕ ಕನ್ನಡ ಮಹಿಳಾ ಬರಹಗಾರರಲ್ಲಿ ಕೆ. ಷರೀಫಾ ವಿಶಿಷ್ಟ ಸಂವೇದನೆಯುಳ್ಳ ಕೆಲವೇ ಕೆಲವು ಕವಯತ್ರಿಯರಲ್ಲಿ ಪ್ರಮುಖರಾಗಿದ್ದಾರೆ. ಬಂಡಾಯ ಸಾಹಿತ್ಯ ಚಳವಳಿಯ ಆರಂಭದ ಆದಿಯಾಗಿ ಇವತ್ತಿಗೂ ಕೂಡ ಅವರ ಬರಹಗಳು ಬಂಡಾಯದ ಮನೋಧೋರಣೆಯನ್ನು ಒಳಗೊಂಡಿರುವ ಬರಹಗಳಾಗಿವೆ.

ಅದರಲ್ಲಿಯೂ ಅವರ ಕಾವ್ಯದಲ್ಲಿ ವ್ಯಕ್ತಗೊಂಡಿರುವ ಬಂಡಾಯದ ನೆಲೆಗಳನ್ನು ಹಲವು ಮಜಲುಗಳಲ್ಲಿ ಗುರುತಿಸಬಹುದಾಗಿದೆ. ಮೂಲತಃ ಮುಸ್ಲಿಂ ಸಮುದಾಯದಿಂದ ಬಂದ ಷರೀಫಾರವರು ಸಹಜವಾಗಿಯೇ ಆ ಧರ್ಮದಲ್ಲಿರುವ ಆಚಾರ-ಅನಾಚಾರಗಳನ್ನು ತಮ್ಮ ಕಾವ್ಯದ ಮುಖೇನ ಅನಾವರಣಗೊಳಿಸಿದ್ದಾರೆ. ಈ ವ್ಯವಸ್ಥೆಯಲ್ಲಿ ಹೆಣ್ಣಿನ ಬಗೆಗೆ ಇರಬಹುದಾದ, ಇರುವ ಸಂಕುಚಿತ ಮನೋಧೋರಣೆಯನ್ನು ಬಯಲಿಗೆಳೆದಿದ್ದಾರೆ. ಇದು ಕೇವಲ ಕೆ. ಷರೀಫಾರವರ ಕಾವ್ಯಕ್ಕಷ್ಟೇ ಅನ್ವಯಿಸದೆ ಒಟ್ಟು ಕನ್ನಡ ಮಹಿಳಾ ಕಾವ್ಯಕ್ಕೂ ಕೂಡ ಅನ್ವಯಿಸುತ್ತದೆ. "ಆಧುನಿಕ ಮಹಿಳಾ ಕಾವ್ಯದಲ್ಲಿ ಹೆಣ್ಣನ್ನು ಅಂಚಿನಿಂದ ಕೇಂದ್ರಕ್ಕೆ ತಂದುಕೊಂಡ ನಿರೂಪಣೆ"[1]ಯು ಈ ಕಾಲಘಟ್ಟದಲ್ಲಿ ಮುನ್ನೆಲೆಗೆ ಬಂತು. "ಹೆಣ್ಣು ಪ್ರತಿನಿಧಿಸುವ ಸಾಮಾಜಿಕ ವರ್ಗ ಯಾವುದೇ ಆದರೂ ಎಲ್ಲ ಹೆಣ್ಣುಗಳ ಬವಣೆಗಳನ್ನು ಕುರಿತ ನಿರೂಪಣೆಗಳೂ ಇಲ್ಲಿ ಕೆಲವು ಇವೆ. ಅಲ್ಲದೇ ಅಲ್ಲಿ ಅನುಭವ ಮತ್ತು ಅಭಿವ್ಯಕ್ತಿ ಕ್ರಮದಲ್ಲಿ ವ್ಯತ್ಯಾಸಗಳೂ ಇವೆ. ಇದ್ದರೂ ಹೆಣ್ಣು ನಿರೂಪಿತ ಕಾವ್ಯದಲ್ಲಿ ಒಂದು ಒಕ್ಕೊರಲು ಇದೆ. ಇದು ಮಹಿಳಾ ಕಾವ್ಯದ ಲಕ್ಷಣವೂ ಹೌದು; ಶಕ್ತಿಯೂ ಹೌದು. ಆದರೆ ಇದು ಏಕತಾನದ ದನಿಯಲ್ಲ. ಬಹುತ್ವ ಉಳ್ಳ ಒಕ್ಕೊರಲಿನ ದನಿ. ಈಗಿನ ಮಹಿಳಾ ಕಾವ್ಯ ತನ್ನ ಹಕ್ಕನ್ನು ಮಂಡಿಸುವಾಗ ಕಟುವಾಗಿಯೇ ಕಾಣುತ್ತದೆ. ಖಂಡಿತಾ ಇದು ಹಕ್ಕೊತ್ತಾಯ ಕಾವ್ಯ. ಶತಶತಮಾನದಿಂದ ದನಿಯೇ ಇಲ್ಲದ ಕೊರಳುಗಳು ಚಕ್ಕನೆ ದನಿ ಪಡೆದುಕೊಂಡಾಗ ಉಂಟಾಗುವ ಉತ್ಸಾಹ, ರೋಷ, ಜೋರುಧ್ವನಿ, ಕಟುತನ, ರಾನ್ನೆಸ್ (Rawness) ಎಲ್ಲವನ್ನೂ ಈ ಕಾವ್ಯವು ಒಳಗೊಂಡಿದೆ. ಸಮಾಜದಲ್ಲಿ ತನ್ನ ಹಕ್ಕುಗಳಿಗಾಗಿ ದನಿಯೆತ್ತುವ ಜೊತೆಜೊತೆಗೇ ಇಡೀ ಗಂಡು ಕುಲವನ್ನೇ ಕಟಕಟೆಯಲ್ಲಿ ನಿಲ್ಲಿಸಿ ಕೊರಳು ಪಟ್ಟಿ ಹಿಡಿದು ಪ್ರಶ್ನೆ ಕೇಳುವ ಹಾಗೆ ಈ ಕಾವ್ಯ ಬರೆಯಲ್ಪಟ್ಟಿದೆ. ಹೀಗೆ ಪ್ರಶ್ನಿಸುವಾಗ ನ್ಯಾಯ ಕೇಳುವ, ದಂಡಿಸುವ, ನಿಂದಿಸುವ, ದಾಳಿ ಮಾಡುವ ಧಾಟಿಗಳೆಲ್ಲ ಈ ಒಕ್ಕೊರಲಿನ ದನಿಗೆ ಒದಗಿವೆ. ಇಂತಹ ಒಕ್ಕೊರಲಿನ ದನಿಯ ಸಮರ್ಥ ಪ್ರತಿನಿಧಿಯಾಗಿ"[2] ಕೆ. ಷರೀಫಾರವರು ಕಂಡು ಬರುತ್ತಾರೆ.

ಕೆ. ಷರೀಫಾರವರ ಒಟ್ಟು ಕಾವ್ಯದಲ್ಲಿ ವ್ಯಕ್ತಗೊಂಡಿರುವ ಬಂಡಾಯದ ನೆಲೆಗಳು ಹಲವು. ವೈಯಕ್ತಿಕ ನೆಲೆಯಲ್ಲಿ ತನ್ನ ಕಾವ್ಯ ಲೋಕದಲ್ಲಿ ಸ್ತ್ರೀ ಅಸ್ಮಿತೆಯ ಶೋಧದ ಕಡೆಗೆ ಹೆಜ್ಜೆ ಇಡುವುದು, ನಮ್ಮ ಆಚಾರ, ವಿಚಾರ, ಆಹಾರ, ಉಡುಗೆ ತೊಡುಗೆಗಳೆಂಬ ಒಟ್ಟು ನಮ್ಮ 'ಸಾಂಸ್ಕೃತಿಕ' ಎಂದು ಯಾವುದನ್ನು ಕರೆಯುತ್ತೇವೋ ಅಂತಹ ಸಾಂಸ್ಕೃತಿಕ ನೆಲೆಯಲ್ಲಿ ಬಂಡಾಯದ ಕುರುಹುಗಳನ್ನು ನೋಡಬಹುದು. ಅಷ್ಟೇ ಅಲ್ಲದೆ ಕೆ. ಷರೀಫಾರವರು ಯಾವಾಗಲೂ ವರ್ತಮಾನದ ತಲ್ಲಣಗಳಿಗೆ ಪ್ರತಿಕ್ರಿಯಿಸುತ್ತಾ, ಪ್ರತಿಭಟಿಸುವ ಕ್ರಮವೊಂದನ್ನೂ ಸಹ ಕಾಣಬಹುದು. ಇದು ಕೇವಲ ಷರೀಫಾರವರಿಗಷ್ಟೇ ಸೀಮಿತವಾಗಿರದೆ ಯಾವುದೇ ಕವಿ/ಕಲಾವಿದನಾಗಿರಲಿ ವರ್ತಮಾನದ ತಲ್ಲಣಗಳಿಗೆ, ಸಮಕಾಲೀನ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವುದು ಅನಿವಾರ್ಯವಾಗಿದೆ ಮತ್ತು ಪ್ರತಿಕ್ರಿಯಿಸುವ ಅವರ ಆದ್ಯತೆಯೂ ಸಹ ಆಗಿರುತ್ತದೆ. ಇವರ ಕಾಲದಲ್ಲಿ ಕಂಡುಬರುವ ಮತ್ತೊಂದು ಮುಖ್ಯ ನೆಲೆಯೆಂದರೆ ಚರಿತ್ರೆ ಮತ್ತು

ಪುರಾಣಗಳನ್ನು ಸಮಕಾಲೀನಗೊಳಿಸುವುದು. ಅಂದರೆ ಚರಿತ್ರೆ ಮತ್ತು ಪುರಾಣಗಳಲ್ಲಿ ಅಂಚಿಗೆ ಸರಿದು ಹೋಗಿರುವಂತಹ ಪಾತ್ರಗಳನ್ನು ಕೇಂದ್ರ ಪರಿಧಿಗೆ ತಂದು ಆ ಪಾತ್ರಗಳ ಮುಖಾಂತರ ದನಿಯೆತ್ತುವುದು. ಇನ್ನುಳಿದಂತೆ ಪ್ರಕೃತಿಯ ಚಿತ್ರಣ ಮತ್ತು ದಮನಕಾರಿ ನೆಲೆಗಳು ಇವರ ಕಾವ್ಯದಲ್ಲಿ ವ್ಯಕ್ತಗೊಂಡಿವೆ. ಇಂತಹ ಬಂಡಾಯದ ನೆಲೆಗಳನ್ನು ಚರ್ಚಿಸುವುದು ಈ ಅಧ್ಯಾಯದ ಮುಖ್ಯ ಗುರಿಯಾಗಿದೆ.

**ನಿಮ್ಮ ಚರಿತ್ರೆಯಲ್ಲಿ**
**ಅವಳು ಮೂಡಿದ್ದು ಸಾಕು**
**ಹೊಸ ಚರಿತ್ರೆ ರಚಿಸುವ ಕೈ**
**ಬುದ್ಧಿ ಭಾವಗಳೆಲ್ಲವೂ**
**ಅವಳವೇ ಆಗಿರಲಿ ಸಾಕು**[3]

ಗಂಡು ಮತ್ತು ಹೆಣ್ಣು ಈ ಲೋಕದ ಸಮಾನ ಕಣ್ಣುಗಳು. ಆದರೆ ಇಲ್ಲಿ ಒಂದು ಕಣ್ಣನ್ನು ಒಂದು ರೀತಿಯಲ್ಲಿ ಮತ್ತೊಂದು ಕಣ್ಣನ್ನು ಇನ್ನೊಂದು ರೀತಿಯಲ್ಲಿ ಕಾಣುತ್ತಿರುವುದು ದುರಂತ. ಆ ದುರಂತದ ಹಾದಿಯಲ್ಲಿ ಇಲ್ಲಿಯವರೆಗೂ ಅಸಮಾನತೆಯ ಹಾದಿಯಲ್ಲಿ ಸಾಗಿದ್ದೇವೆ. ಪುರುಷನು ಬರೆದ ಚರಿತ್ರೆಯಲ್ಲಿ ಪುರುಷನಷ್ಟೇ ಮೂಡಿ ಬಂದಿದ್ದಾನೆ. ಹೆಣ್ಣು ಅದರ ನೆರಳಾಗಿ ಮೂಡಿ ಬಂದಿದ್ದಾಳೆ. ಆದರೆ ಈಗ ಕಾಲ ಬದಲಾಗಿದೆ. ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ ಎಂಬುದು ಗೊತ್ತು ಎಂಬ ವಾಸ್ತವದ ಸಂಗತಿಯನ್ನು ಚಿತ್ರಿಸುತ್ತಾ, ಗಂಡಿನ ಚರಿತ್ರೆಯಲ್ಲಿ ಹೆಣ್ಣು ಅಪೂರ್ಣ. ಈ ಅಪೂರ್ಣವನ್ನು ತುಂಬಲು ಅವಳ ಚರಿತ್ರೆಯು ಈಗ ಅಗತ್ಯ. ಹೀಗೆ ಮಹಿಳಾ ಕಾವ್ಯ ಅರ್ಥಾತ್ ಷರೀಫಾರವರ ಕಾವ್ಯ ಲಿಂಗ ಸಮಾನತೆಯನ್ನು ಒತ್ತಾಯಿಸುವ ಹೊಸ ಚರಿತ್ರೆಯನ್ನು ರಚಿಸುವಂತೆ ಒತ್ತಾಯಿಸುತ್ತದೆ.

'ಯಾವ ಹೆಣ್ಣು ಹೆಣ್ತನವನ್ನು ಮೈವೆತ್ತಿ ಹುಟ್ಟುವುದಿಲ್ಲ. ಆಕೆಯನ್ನು ಹೆಣ್ಣಾಗಿ ನಮ್ಮ ಸಮಾಜ ರೂಪಿಸುತ್ತದೆ' ಎಂದು ಸಿಮೋನ್ ದ ಬೋವಾ ಹೇಳುವಂತೆ, ಹೆಣ್ಣು ಹೀಗೆಯೇ ಇರಬೇಕೆಂಬ ಕಟ್ಟಳೆಯನ್ನು ಈ ವ್ಯವಸ್ಥೆಯು ರೂಪಿಸಿದೆ. ಇಂತಹ ನಿರ್ಬಂಧದ ಬದುಕನ್ನು ಹೆಣ್ಣು ಬದುಕುತ್ತಿರುವುದನ್ನು ಕೆ. ಷರೀಫಾ ಆಕ್ಷೇಪಿಸುತ್ತಾರೆ.

**ಹೆಣ್ಣು ತಲೆಯೆತ್ತಿ ನಡೆದರೆ**
**ಅಹಂಕಾರಿ ಎಂದುಕೊಳ್ಳುತ್ತೀರಿ**
**ತಲೆ ಬಗ್ಗಿ ನಡೆದರೆ**
**ಅಪರಾಧಿಯಂತೆ ಹೆಣ್ಣನ್ನು ನೋಡುತ್ತೀರಿ**
**ಮೌನವಾಗಿದ್ದರೆ**
**ಮೂಕಿ ಅಂತೀರಿ**
**ಮಾತಾಡಿದರೆ**
**ವಾಚಾಳಿ ಅಂತೀರಿ**[4]

ಎಂದು ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಇನ್ನು ಹೀಗೆ ಇರಬೇಕೆಂದು ನೀವೇ ಹೇಳಿ ಎಂದು ವ್ಯಂಗ್ಯವಾಗಿ ಪ್ರತಿಕ್ರಿಯಿಸುತ್ತಾರೆ. ಹೆಣ್ಣು ತನ್ನ ನಗುಮುಖದ

ಹಿಂದೆ ಅಡಗಿರುವ ಅನೇಕ ನೋವು, ಯಾತನೆ, ವಿಷಾದ, ಹತಾಶೆಗಳನ್ನು ಯಾತನಾ ಶಿಬಿರ ಹಾಗೂ ಗೋರಿಯ ಸ್ಥಿತಿಗೆ ಸಮೀಕರಿಸಿದ್ದಾರೆ.

**ನಾನು ಬಹಳ ಸುಖೀ ಎಂದು**
**ನೀನು ತಿಳಿದಿರಬಹುದು**
**ನನ್ನ ಬದುಕು ಪೂರ್ತಿ**
**ನೋವು ಯಾತನೆಯ ಶಿಬಿರ**
**ಹೃದಯ ತುಂಬ**
**ಮಾಯದ ಗಾಯ, ನೋವು**
**ನಿಟ್ಟುಸಿರ ತಾಪಜ್ವಾಲೆ**[5]

**ಮನೆ ಮನೆಗೂ ಕಿಂಡಿಗಳಿವೆ**
**ದಿನ ಬೆಳಗು ಕಾಡುವ**
**ಸಾವಿರಾರು ಚಿಂತನೆಗಳಿವೆ**
....................................
**ಯುಗಯುಗಗಳಿಂದಲೂ ನಿರಂತರ**
**ನಡೆಯುತ್ತಿರುವ ದುಃಖಾಂತ್ಯದ**
**ಧಾರಾವಾಹಿಗಳಿವೆ**[6]

ಮಹಿಳೆಯು ಶತಮಾನಗಳಿಂದಲೂ ಅಪಮಾನ, ಹಿಂಸೆ, ನೋವು, ಒಂದಲ್ಲೊಂದು ಬಗೆಯ ಶೋಷಣೆಯನ್ನು ಅನುಭವಿಸುತ್ತಲೇ ಇದ್ದಾಳೆ. ಸಂಪ್ರದಾಯಬದ್ಧ ಭಾರತದಂತಹ ರಾಷ್ಟ್ರದಲ್ಲಿ ಸಂಸ್ಕೃತಿ ಎಂಬ ಹೆಸರಿಗೆ ಇಡೀ ವಿಶ್ವವು ಗೌರವಿಸುತ್ತಿರಬಹುದು. ಇದೇ ನಮ್ಮ ಹೆಮ್ಮೆಯೇ ಆಗಿರಬಹುದು. ಆದರೆ ಸಾಂಸ್ಕೃತಿಕವಾಗಿ ಸಂಪದ್ಭರಿತ ರಾಷ್ಟ್ರಗಳಲ್ಲಿ ಸಂಸ್ಕೃತಿಯ ಹೆಸರಿನಲ್ಲಿ ಹೆಣ್ಣನ್ನು ಜೀವಂತವಾಗಿ ದಹಿಸಲಾಗುತ್ತಿದೆ. ಅದು ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗಿನಿಂದ. ಇಂತಹ ಎಷ್ಟೋ ಹೆಣ್ಣುಗಳು ಇಂತಹ ಹೇಯ ಕೃತ್ಯದಿಂದ ತಮ್ಮನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಕವಿಯು ವಿಷಾದಿಸುತ್ತಾರೆ. ಎಲ್ಲಿಯವರೆಗೆ ಇಂತಹ ನೋವಿನ ಹೇಯಕೃತ್ಯಗಳನ್ನು ಸಹಿಸಿಕೊಂಡಿರಬೇಕು? ಸಹಿಸಿಕೊಂಡಿರುವುದಕ್ಕೂ ಒಂದು ಮಿತಿ ಇರುತ್ತದೆ ಎಂದು ಈ ವ್ಯವಸ್ಥೆಯ ವಿರುದ್ಧ ಕಿಡಿ ಕಾರುತ್ತಾರೆ. ಈ ಕೆಳಗಿನ ಪದ್ಯವನ್ನು ಉದಾಹರಣೆಗೆ ನೋಡಬಹುದು–

**ನೋವು ಹಿಂಸೆ ತಾಳಿಕೊಂಡೆವು**
**ಬೈಗುಳ ಅಪಮಾನದಲಿ ಸಹಿಸಿಕೊಂಡೆವು**
**ಸೀಮೆಎಣ್ಣೆ ಸುರಿದು ಬೆಂಕಿಯಿಟ್ಟಾಗ**
**ತಾಳದೆ ಝಳ ಕೂಗಿಕೊಂಡೆವು**
**ಆತ್ಮಗಳು ತಿರುಗಿ ನಿಂತು ಕೇಳಿದವು**
**ತಾಳೋದಂದ್ರೆ ಎಲ್ಲಿತನಕ?**[7]

ಇಂತಹ ನೋವುಗಳು, ಸಂಕಟಗಳು ಕೇವಲ ಭಾರತದಲ್ಲಷ್ಟೇ ಅಲ್ಲ ಇಡೀ ಜಗತ್ತಿನ ಮಹಿಳೆಯರ ಜಗತ್ತು ಕೂಡ ನೋವಿನಿಂದ ಕೂಡಿದೆ ಎಂಬ ಅಭಿಪ್ರಾಯವನ್ನು

ಪಡುತ್ತಾರೆ.

**ಭಿನ್ನ ಭಿನ್ನ ಸಂಸ್ಕೃತಿಗಳಲಿ**
**ಹುದುಗಿರುವ ಹೆಣ್ಣುಗಳು**
**ನೋವಿನೆಳೆ–ಎಳೆಗಳ ಬಣ್ಣ**
**ಭಿನ್ನವಲ್ಲ ಒಂದೇ ಎಲ್ಲ**[8]

ಕಾಲ ಮತ್ತು ದೇಶ ಭಿನ್ನವಾಗಿರಬಹುದು, ಆದರೆ ಬದುಕು ಮಾತ್ರ ಸಮಾನವಾದದ್ದು, ನೋವಿನಿಂದ ಕೂಡಿರುವಂತಹುದ್ದು. ಸಂಸ್ಕೃತಿಯ ಹೆಸರಿನಲ್ಲಿ ಶೋಷಕ ವರ್ಗವು ಶೋಷಿತ ವರ್ಗವನ್ನು ಬಂಧಿಸಿಟ್ಟುಕೊಂಡಿರುವುದು ಇವತ್ತಿಗೂ ಬಿಡಿಸಿಕೊಳ್ಳಲು ಸಾಧ್ಯವಾಗದಿರುವುದು ವಿಷಾದನೀಯ. "ಸಂಸ್ಕೃತಿಯು ಮೇಲು ಜಾತಿಗಳ ಪರವಾದ ಧೋರಣೆ ಮತ್ತು ಪುರುಷ ಪಕ್ಷಪಾತವಾದ ಧೋರಣೆಗಳೆರಡರಿಂದಲೂ ಶೋಷಿತವಾಗಿ ಅನಭಿವ್ಯಕ್ತವಾಗಿಯೇ ಉಳಿದ ಮಹಿಳೆಯರ ಬರವಣಿಗೆಯ"[9] ಮಾದರಿಯೊಂದನ್ನು ಪ್ರತಿನಿಧಿಸುತ್ತದೆ.

ಡಾ. ಕೆ. ಷರೀಫಾರವರ ಕಾವ್ಯ ಮಾದರಿ ಯಾವುದು ಎಂಬುದನ್ನು ಹುಡುಕುತ್ತಾ ಹೋದರೆ ಅವರು ತನ್ನ ಕಾವ್ಯದ ಬಗೆಗೆ ಹೀಗೆ ಹೇಳುತ್ತಾರೆ.

**ಬೆಂಕಿಯ ಕುಲುಮೆಯಲಿ**
**ಉರಿದುರಿದು ಹೊರಬರುವ**
**ನನ್ನ ನೋವಿನ ಕವನಗಳು**
**ನೋವಿನ ಕುಲುಮೆಯಲಿ ಸುಟ್ಟು ಕೆಂಪಾಗಿ**
**ಹೃದಯದಲಿ ಹುಗಿದಿಟ್ಟ**
**ಮದ್ದುಗುಂಡುಗಳು**[10]

ಇಲ್ಲಿ ಕವಯಿತ್ರಿ ತಮ್ಮ ಬದುಕಿನ ಅನುಭವಗಳನ್ನು ಮತ್ತು ಮಹಿಳೆಯಾಗಿ ತಾವುಂಡ ನೋವನ್ನು 'ಬೆಂಕಿಯ ಕುಲುಮೆ'ಗೆ ಹೋಲಿಸಿದ್ದಾರೆ. ಕುಲುಮೆಯಲ್ಲಿ ಹೇಗೆ ಕಬ್ಬಿಣವು ಕಾದಿ ಕೆಂಪಾಗುತ್ತದೆಯೋ, ಹಾಗೆಯೇ ಇವರ ಕವಿತೆಗಳು ಶತಮಾನಗಳ ಶೋಷಣೆ ಮತ್ತು ನೋವಿನ ಬೆಂಕಿಯಲ್ಲಿ ಬೆಂದು ಹೊರಬಂದಿವೆ ಎಂಬುದನ್ನು ಮನಗಾಣಿಸುತ್ತವೆ.

**ನೋವಿನ ಕುಲುಮೆಯಲಿ**
**ಕುದಿಕುದಿದು ಹೊರಬರುವ**
**ಕೆಂಡದುಂಡೆಗಳಂತಹ ಕವನಗಳು**
**ಸಿಡಿದರೆ ಕಿಡಿಗಳಾದಾವು**[11]

ತಣ್ಣಗಿನ ಹೂವುಗಳಲ್ಲ. ಅವು ಸ್ಫೋಟಗೊಳ್ಳಲು ಸಿದ್ಧವಾಗಿರುವ 'ಮದ್ದುಗುಂಡುಗಳು' (Explosives) ಮತ್ತು ಸುಡುವ 'ಕೆಂಡದ ಉಂಡೆಗಳು'. ಅಂದರೆ, ಇವರ ಸಾಹಿತ್ಯದಲ್ಲಿ ಸುಮ್ಮನೆ ಅಳುವ ಗುಣವಿಲ್ಲ; ಬದಲಿಗೆ ವ್ಯವಸ್ಥೆಯನ್ನು ಪ್ರಶ್ನಿಸುವ, ಸಿಡಿದೇಳುವ ಮತ್ತು ಅನ್ಯಾಯವನ್ನು ಸುಡುವ ಶಕ್ತಿಯಿದೆ. ಇವು ಹೃದಯದಲ್ಲಿ ಅಡಗಿರುವ ನೋವಿನ ಸ್ಫೋಟಗಳಾಗಿ ವ್ಯಕ್ತಗೊಂಡಿವೆ.

**ಬೆಂಕಿ ಜ್ವಾಲೆಗೆ ದೂಡುವ**
**ಕೈಗಳನ್ನು ಕತ್ತರಿಸಲು**
**ಝಳಪಿಸುವ ಖಡ್ಗವಾಗು**
**ಶತ್ರುಗಳ ಸೆಣಸಿ ನಿಲ್ಲಲು**
**ಆತ್ಮ ವಿಶ್ವಾಸದ ಆಯುಧವಾಗು**[12]

ಷರೀಫಾರವರು ಮೂಲತಃ ಚಳುವಳಿ ಮತ್ತು ಸಂಘಟನೆ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಆದುದರಿಂದ ಸಹಜವಾಗಿಯೇ ಅವರ ಬರಹಗಳಲ್ಲಿ ಈ ಬಗೆಯ ಗುಡುಗು, ಸಿಡಿಲು, ಬೆಂಕಿ ಕಿಡಿಗಳು ಉರಿಯುತ್ತಿರುವುದನ್ನು ಕಾಣಬಹುದು. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ "ಹೆಣ್ಣುಮಕ್ಕಳ ಲೋಕವನ್ನು ಹೆಣ್ಣುಮಕ್ಕಳು ನೋಡುವುದಕ್ಕೂ ಒಟ್ಟು ಲೋಕವು ಹೆಣ್ಣಿನ ನೋಟದಿಂದ ನೋಡುವುದಕ್ಕೂ ವ್ಯತ್ಯಾಸಗಳಿವೆ. ಹೆಣ್ಣಿನ ಅನುಭವ ಲೋಕವೇ ಬೇರೆ, ಒಟ್ಟು ಲೋಕದ ಅನುಭವವೇ ಬೇರೆ. ಹಾಗಾಗಿ ಇಲ್ಲಿ ವ್ಯಕ್ತಗೊಂಡಿರುವ ಪ್ರತಿಭಟನಾತ್ಮಕವಾದ ಸ್ವರೂಪ ಕೇವಲ ಒಂದು ಹೆಣ್ಣಿನ ನೋವೇ ಆಗಿದ್ದರೂ ಅದು ದರ್ಶಿಸುವ ಸಮಷ್ಟಿಯಾದ ಹೆಣ್ಣಿನ ಪರವಾದ ನಿಲುವೇ ಆಗಿದೆ".[13] ಇಂತಹ ಬಂಡಾಯದ ಮನೋಭೂಮಿಕೆಯು ಜಗತ್ತಿನ ಹೆಣ್ಣುಗಳ ನೋವಿನ ಕುಲುಮೆಗಳಾಗಿ ಕಂಡುಬರುತ್ತವೆ.

**ಶತಮಾನಗಳ**
**ಭಯಂಕರ ಮೌನವನು**
**ಮುರಿದು ಮಾತಾಡಲೇಬೇಕು**
**ಬದುಕಿಯೂ ಸತ್ತಂತಿರುವ**
**ಕ್ರೂರ ಬದುಕನು ಬಹಿಷ್ಕರಿಸಿ**
**ಬಯಲಿಗೆ ಬರಲೇಬೇಕು**[14]

**ಬನ್ನಿ ನನ್ನ ಕಳೆದ ಸ್ವಾತಂತ್ರ್ಯ**
**ಹುಡುಕಿಕೊಡಿ**
**ನನ್ನ ಮಾತುಗಳನ್ನು**
**ಯಾರು ನೇಣು ಹಾಕಿದರು ಹೇಳ ಬನ್ನಿ**[15]

ಶತಮಾನಗಳಿಂದಲೂ ಮೌನ ವಹಿಸಿದ್ದು ಹೆಣ್ಣೊಬ್ಬಳು ತನ್ನ ನೋವನ್ನು ಅನಿವಾರ್ಯವಾಗಿ ಬಿಚ್ಚಿಡುವ ಕಾಲ ಬಂದೊದಗಿದ್ದು ದಲಿತ–ಬಂಡಾಯ ಕಾಲಘಟ್ಟದ ಅವಧಿಯಲ್ಲಿ. ಹಾಗಾಗಿಯೇ ಇಂತಹ ಪ್ರತಿರೋಧಾತ್ಮಕ ನೆಲೆಯ ರಚನೆಗಳು ಇವರ ಕಾವ್ಯದಲ್ಲಿ ಕಾಣಸಿಗುವುದು ಆಶ್ಚರ್ಯವೇನಲ್ಲ ಎನ್ನಬಹುದು.

"ಎಲ್ಲಿಯವರೆಗೆ ಮಹಿಳೆಯು ಮೌನವಾಗಿರುತ್ತಾಳೋ ಅಲ್ಲಿಯವರೆಗೆ ಅವರು ಚಾರಿತ್ರಿಕ ಪ್ರಕ್ರಿಯೆಗಳ ಹೊರಗೆ ಉಳಿಯುತ್ತಾರೆ. ಆದರೆ ಗಂಡಸರ ಹಾಗೆ ಬರೆಯಲು, ಮಾತನಾಡಲು ತೊಡಗಿದರೆ ಆಗ ಅವರು ಚರಿತ್ರೆಯನ್ನು ಅನಾಥರ ಹಾಗೆ ಅಂಜುಬುರುಕ ಮೋರೆ ಹಾಕಿಕೊಂಡು ಪ್ರವೇಶಿಸಬೇಕಾಗುತ್ತದೆ. ತರ್ಕಬದ್ಧವಾಗಿ ನೋಡಿದರೆ ಅದು ಅವರು ತಮ್ಮ ಮಾತಿನ ಮೂಲಕವೇ ಕಲ್ಲೋಲಗೊಳಿಸಬೇಕಾದ

ಚರಿತ್ರೆ”.[16] ಎಚ್ಚೆತ್ತ ಮಹಿಳೆಯೊಬ್ಬಳು ಈಗ ತನಗಾದ ಅನ್ಯಾಯವನ್ನು ಪ್ರಶ್ನಿಸಿ ಮಾತನಾಡುವ ಅನಿವಾರ್ಯತೆ ಬಂದಿದೆ ಎಂದು ವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಭೀಡೆಯಿಂದ ಕೇಳುತ್ತಿದ್ದಾಳೆ. ಇದು ಒಂದು ಚಾರಿತ್ರಿಕ ದಾಖಲೆಯಾಗಿದೆ. ಮೌನವನ್ನು ಮುರಿದು ಮಾತನಾಡುವ ಅನಿವಾರ್ಯತೆ ಬಂದೊದಗಿರುವ ಸಂಗತಿಯನ್ನು ಈ ಮೂಲಕ ವಿವರಿಸುತ್ತಾರೆ.

**ಹಾಡಬೇಕಿದೆ ಗೆಳತಿ**
**ಹಾಡೊಂದನು ನಾನು**
**ಶತಮಾನಗಳಿಂದ ಹೊಲಿದ**
**ತುಟಿಗಳ ಎರಡು ಮಾಡಿ**
**ಘೋರ ಕತ್ತಲೆಯನು**
**ಸೀಳುತ್ತಾ ಕೂಗಿ ಕೂಗಿ**
**ಹೇಳಬೇಕಿದೆ ಜಗಕೆ**[17]

**ನನ್ನ ಸಹನೆಯ ತಂಪು**
**ತಂಗಾಳಿ ಕಂಡಿರುವಿರೇ ವಿನಃ**
**ನನ್ನೊಳಗೆ ಹೊತ್ತಿರುವ**
**ಸಿಡಿ ತಲೆಯ ಕಿಡಿಯನ್ನು**
**ನೀವೆಂತೂ ಕಂಡೀರಿ?**[18]

‘ನನಗೆ ಮಾತಾಡಲು ಬಿಡಿ’ ಎಂಬ ಕವಿತೆಯಲ್ಲಿ ನಮ್ಮ ಪರಂಪರೆಯಿಂದಲೂ ಹೆಣ್ಣು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಯಲ್ಲಿ ಸಿಲುಕಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾಳೆ. ಇದು ಒಟ್ಟು ಭಾರತದ ಹೆಣ್ಣುಗಳ ಬದುಕು ಎಂದರೂ ತಪ್ಪಾಗಲಾರದು. ‘ಹೆಣ್ಣು ಮುನಿದರೆ ಮಾರಿ’ ಎಂಬಂತೆ ಎಲ್ಲಿಯವರೆಗೆ ನೋವನ್ನು ಸಹಿಸಿಕೊಂಡಿರಲು ಸಾಧ್ಯ? ಒಂದಲ್ಲ ಒಂದು ಘಳಿಗೆಯಲ್ಲಿ ತನಗಾದ ಅನ್ಯಾಯದ ವಿರುದ್ಧ ಧ್ವನಿ ಮೊಳಗುತ್ತದೆ. ‘ಯಾರೇ ಧ್ವನಿಯೆತ್ತಿದರೂ ನಿಶ್ಯಬ್ಧವಾದ ಮೌನವನ್ನು ಮುರಿಯುವುದಕ್ಕೆ, ಹೊಸ ಶಕೆಯೊಂದನ್ನು ನಿರ್ಮಿಸುವುದಕ್ಕೆ’ ಎನ್ನುವಂತೆ ಭಾರತೀಯ ಮಹಿಳೆಯು ಆಧುನಿಕ ಶಿಕ್ಷಣವನ್ನು ಪಡೆದು ಶೋಷಣೆಯ ವಿರುದ್ಧ ಮಾತನಾಡಲು ಸಶಕ್ತಳು ಎನ್ನುವುದಕ್ಕೆ ಈ ಕವಿತೆಯ ಸಾಲುಗಳನ್ನು ಉದಾಹರಿಸಬಹುದು.

**ಎಲ್ಲಿಯವರೆಗೆ ನಾನು ನಿಮ್ಮ**
**ಮಾರಾಟದ ಸರಕುಗಳಿಗೆ**
**ವಿಜ್ಞಾಪನಾ ವಸ್ತುವಾಗಿರಲಿ**
**ನಾನು ಎಲ್ಲಿಯವರೆಗೆ**
**ಅಗ್ಗದ ಪ್ರಚಾರ ಮಾಧ್ಯಮವಾಗಿರಲಿ**
**ಎಲ್ಲಿಯವರೆಗೆ ನೋವು ಸೃಷ್ಟಿಸಿ**
**‘ಮಿಥಿಕ್’ ಬಂಧಿಯಾಗರಲಿ**
**ನಾನು ಎಲ್ಲಿಯವರೆಗೆ**

**ನಿಮ್ಮ ಮನೋರಂಜನೆಯ**
**ಮಾಧ್ಯಮವಾಗಿರಲಿ**
**ಹೆಣ್ಣು ದೇವತೆಯೆಂದು ಹೇಳುವಿರಿ**
**ಮತ್ತೆ ಅವಳ ವ್ಯಾಪಾರ ಮಾಡುವಿರಿ**[19]

'ಆಕ್ರೋಶ' ಎಂಬ ಕವಿತೆಯಲ್ಲಿ ಬಡತನ, ಹಸಿವು, ಅಸಮಾನತೆ, ಬಂಡವಾಳಶಾಹಿ, ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಕ್ರಮದಲ್ಲಿ ಕವಿತೆ ಕಟ್ಟಿದ್ದಾರೆ.

**ನನ್ನ ತಾಳ್ಮೆ ನೀ ನೋಡಬ್ಯಾಡ ಪರೀಕ್ಷಿಸಿ**
**ನ್ಯಾಯಕ್ಕಾಗಿ ನಾ ಹೋರಾಡಬೇಕು**
**ತೆಪ್ಪಗೆ ಮುಖ ಸೊಪ್ಪ**
**ಹಾಕೋದಿಲ್ಲ, ನಾನೀಗ**
**ಸಿಡಿದೇಳ್ತೀನಿ ನಾನು**
**ಭಂಡರ ಕ್ರೂರ ಮುಷ್ಠಿಯಿಂದ**
**ಶತಮಾನಗಳ ದಾಸ್ಯ, ಗುಲಾಮಗಿರಿ**
**ಶೋಷಣೆಯಿಂದ ನಾನು ಎಚ್ಚೆತ್ತಾಗ**
**ಕತಕತ ಕುದಿತಾದ ನನ್ನ ರಕ್ತ**
**ಬಚ್ಚಲ ರೊಚ್ಚಿನ**
**ಹೊಲಸು ತುಂಬಿದ ಸಮಾಜದ**
**ಅವ್ಯವಸ್ಥೆಯ ವಿರುದ್ಧ ಹೋರಾಡಲು**
.........................................................
**ಶೋಷಣೆಗೊಳಗಾದ ನನ್ನ**
**ಪ್ರತಿಯೊಂದು ಮೂಳೆಯೂ**
**ಆಕ್ರೋಶದಿಂದ ಕೂಗತ್ತಾವ**
**ನನ್ನ ಶ್ರಮದ ಪ್ರತಿಫಲವನ್ನು ಕೇಳುತಾವೆ**[20]

'ರೂಪಕನ್ವರು' ಎಂಬ ಕವಿತೆಯಲ್ಲಿ ಹೆಣ್ಣನ್ನು ಸತಿಯಾಗಿ ಸ್ವೀಕರಿಸುತ್ತಾರೆ. ದೈವೀ ಸ್ವರೂಪದಲ್ಲಿ ಕಾಣುತ್ತಾರೆ. ಆದರೆ ಇವೆಲ್ಲವೂ ಆಚರಣೆಗೆ ಬಾರದಿರುವುದು ವಿಪರ್ಯಾಸವೇ ಸರಿ.

**ನಿನ್ನ ಸತಿಯಾಗಿಸಿ**
**ಚಿತೆಯೇರಿಸಿ**
**ದೇವಿಯ ಪಟ್ಟ ಕಟ್ಟಿ**
**ನಿನ್ನ ಸಮಾಧಿಯಾ ಮೇಲೆ**
**ಹೆಣಭಾರದ ಕಲ್ಲನಿಟ್ಟು**
**ಪೂಜೆಗೈವರು ಇವರು**
..............................................
**ನಿನ್ನ ಬದುಕನ್ನೇ ನುಂಗಿದ**
**ಅವರ ಧರ್ಮಶಾಸ್ತ್ರಗಳಿಗೆ**
**ಬೆಂಕಿಯಿಡುತ್ತಾರೆ**
**ವಿಜಯದ ಕಹಳೆ ಊದುತ್ತಾರೆ**

**ಏಕೆಂದರೆ ಅವರೀಗ**
**ಮನುಷ್ಯರಾಗಿದ್ದಾರೆ[21]**

ಸತಿ ಪದ್ಧತಿಯಿಂದ ಕನ್ವರಳ ಸಾವು, ಶತಮಾನದಿಂದ ಹೆಣ್ಣಿನ ಮೇಲೆ ಕ್ರೌರ್ಯ ಮತ್ತೆ ಮತ್ತೆ ಹೆಚ್ಚಾಗುತ್ತಿರುವ ಸ್ತ್ರೀ ಶೋಷಣೆಯ ವಿರುದ್ಧ ಸಮರ ಸಾರುವ, ಧರ್ಮದ ಬಂಡವಾಳವನ್ನು ಬೀದಿಗೆಳೆದು ಅದನ್ನು ಬೆಂಕಿಯಿಟ್ಟು ಸುಡಬೇಕು. ಆ ಮೂಲಕ ಮನುಷ್ಯರಾಗಿ ಮನುಷ್ಯ ಸಮಾಜವನ್ನು ಕಟ್ಟಬೇಕೆನ್ನುವ ಆಶಯ ಈ ಕವಿತೆಯದ್ದಾಗಿದೆ.

ಬಡವನ ಸಿಟ್ಟು ದವಡೆಗೆ ಮೂಲವೆಂಬಂತೆ ಹೆಣ್ಣು ತಾನು ಮುನಿದರೆ ಯಾರ ಮೇಲೆ ಸಿಟ್ಟು ತೀರಿಸಿಕೊಳ್ಳಬಲ್ಲಳು? ಅವಳಿಗೆ ಅವಳೇ ಕೋಪಿಸಿಕೊಳ್ಳಬೇಕಾಗುತ್ತದೆ. ಅವಳಿಗವಳೇ ಸಾಂತ್ವನ ಹೇಳಿಕೊಳ್ಳಬೇಕಾಗುತ್ತದೆ.

**ಕನ್ನಡಿಯ ಎದುರು**
**ಅಪರೂಪಕ್ಕೆ ಕೂತ ನಾನು**
**ದಿಟ್ಟಿಸಿ ನೋಡಿದೆ**
**ನನ್ನ ಬಿಂಬ ನನ್ನನ್ನೇ**
**ಅಣಕಿಸುವಂತೆ ಕಂಡಿತು**
**ಸಿಟ್ಟಿನಿಂದ**
**ಮುಷ್ಠಿ ಬಿಗಿ ಮಾಡಿ**
**ಜೋರಾಗಿ ಹೊಡೆದೆ**
**ಕನ್ನಡಿ ಚೂರುಚೂರಾಗಿ**
**ನೆಲಕ್ಕೆ ಬಿದ್ದು**
**ಒದ್ದಾಡಿ ಹೇಳಿತು**
**“ಇದರಲ್ಲಿ ನನ್ನದೇನು ತಪ್ಪು?”[22]**

‘ಹಡೆದವ್ವನಿಗೆ ಕೇಳಿಸುವುದೇನೆ?’ ಎಂಬ ಕವಿತೆಯಲ್ಲಿ ಹೆಣ್ಣಿನ ಮೂಕವೇದನೆಯಲ್ಲಿ ತನ್ನ ಸ್ಥಾನ ಯಾವುದು ಎಂಬುದನ್ನು ವೇದನೆಯಿಂದ ಹೀಗೆ ಹೇಳುತ್ತಾರೆ.

**ನಾನವನ ಅರ್ಧಾಂಗಿ**
**ಅವನ ಯಾವ ಅಂಗದ ಮೇಲೆ**
**ನನಗೆ ಅಧಿಕಾರವಿದೆ ಹೇಳು?[23]**

ಪುರುಷಾಹಂಕಾರದ ಆಧಿಕ್ಯದ ಈ ವ್ಯವಸ್ಥೆಯಲ್ಲಿ ಅರ್ಧಾಂಗಿಯ ಕಲ್ಪನೆಯೇ ಮೋಸದ್ದು. ಈ ಮೋಸವನ್ನು ಅರಿತೋ ಅರಿಯದೋ ನಮ್ಮ ನಮ್ಮ ದುಡಿಯುವ ಗಂಡಸರೆಲ್ಲಾ ಚಲಾವಣೆಯಲ್ಲಿಟ್ಟಿರುವರು. ನಮ್ಮ ಹಿರಿಯರು ನಮಗೆಂದು ಏನನ್ನೂ ಕೊಡದಿದ್ದರೂ ಮೌಢ್ಯತೆ, ಅಂಧಶ್ರದ್ಧೆಗಳನ್ನೆಲ್ಲಾ ತುಂಬಾ ಉದಾರವಾಗಿಯೇ ನೀಡಿರುವರು. ಹೀಗಾಗಿಯೇ ಎಲ್ಲರ ದೃಷ್ಟಿಯಲ್ಲಿಯೂ ಹೆಣ್ಣು ಕಸಬರಿಗೆ, ಚಪ್ಪಲಿಯಾಗಿಯೇ ಕಾಣಿಸುತ್ತಾಳೆ. ಎರಡನೇ ದರ್ಜೆಯ ಪ್ರಜೆಯಾಗಿ ಕಾಣಿಸುತ್ತಾಳೆ. ಇದು ಸ್ವತಂತ್ರ ಭಾರತದ ದುರಂತವೆಂದರೆ ತಪ್ಪಾಗಲಾರದು.

## ಕೊನೆ ಟಿಪ್ಪಣಿಗಳು:

1. ನುಡಿಯಾಟ, ಪುಟ–118
2. ನುಡಿಯಾಟ, ಪುಟ–119
3. ಬುರ್ಖಾ ಪ್ಯಾರಿಡೈಸ್–37
4. ಬಿಡುಗಡೆಯ ಕವನಗಳು–16
5. ಪಾಂಚಾಲಿ, ಪುಟ–24
6. ಪಾಂಚಾಲಿ, ಪುಟ–45
7. ಪಾಂಚಾಲಿ, ಪುಟ–21
8. ಬುರ್ಖಾ ಪ್ಯಾರಿಡೈಸ್, ಪುಟ–38
9. ಕಣ್ಣ ಹನಿಗಳ ಕಾಣಿಕೆ, ಪುಟ–15
10. ಪಾಂಚಾಲಿ, ಪುಟ–4
11. ನೂರೇನ್‌ಳ ಅಂತರಂಗ, ಪುಟ–3
12. ನೂರೇನ್‌ಳ ಅಂತರಂಗ, ಪುಟ–18
13. ನುಡಿಯಾಟ, ಪುಟ–119
14. ಬಿಡುಗಡೆಯ ಕವನಗಳು, ಪುಟ–18
15. ನೂರೇನ್‌ಳ ಅಂತರಂಗ, ಪುಟ–35
16. ಕಣ್ಣ ಹನಿಗಳ ಕಾಣಿಕೆ, ಪುಟ–4
17. ಮಮ್ತಾಜ್ ಮಹಲ್, ಪುಟ–33
18. ಮಮ್ತಾಜ್ ಮಹಲ್, ಪುಟ–45
19. ಬಿಡುಗಡೆಯ ಕವನಗಳು, ಪುಟ–17
20. ಬಿಡುಗಡೆಯ ಕವನಗಳು, ಪುಟ–33
21. ಬಿಡುಗಡೆಯ ಕವಿತೆಗಳು, ಪುಟ–38
22. ಪಾಂಚಾಲಿ, ಪುಟ–7
23. ನೂರೇನ್‌ಳ ಅಂತರಂಗ, ಪುಟ–6